ಮಾತ್ರ, 'ರಾಮು, ಒಳಗೆ ಹೋಗಿ ಪ್ಯಾಂಟ್ ತೆಗೆದು ಲುಂಗಿ ಉಟ್ಕೋ' ಅಂತ ಹೇಳಿದಳು. ಪ್ಯಾಂಟ್ ಬಿಚ್ಚಿ ಲುಂಗಿ ಉಟ್ಕೊಂಡು ಬಂದ ರಾಮಚಂದ್ರ ಸುತ್ತಲೂ ನೋಡಿದ. ನೊಣಗಳು ಜೀಯ್ಯಂನೆ ಹಾರಾಡುತ್ತಿದ್ದವು. ರಾಮಚಂದ್ರನ ಅಕ್ಕ ಚಂದ್ರವತಿ ಬಿಟ್ಟರೆ ಹೆಣದ ಪಕ್ಕದಲ್ಲಿ ಯಾರೂ ಇದ್ದಿಲ್ಲ. ಚಂದ್ರವತಿ ಎಡಬಿಡದೆ ಗಾಳಿ ಬೀಸುತ್ತಾ ತಾಯಿ ನೆನಪಿಸಿಕೊಂಡು ಕಣ್ಣೀರಾಗುತ್ತಿದ್ದಳು. ರಾಮಚಂದ್ರನ ಅಕ್ಕ ಭಾಗ್ಯ, 'ಸ್ವಲ್ಪೊತ್ತು ಕಣ್ಣು ಮುಚ್ಚುಕೊ. ಬೆಳಕರೆಯುವ ಮುಂಚೆ ಎದ್ದುಬಿಡು. ಹಿಂಗೆ ಗಾಳಿ ಅಕ್ಯಾಂತ ಎಷ್ಟೊತ್ತು ಕುಂದ್ರುತಿದಿ' ಅಂದಾಗ, ಚಂದ್ರವತಿ 'ಇಲ್ಲಮ್ಮ ನಾ ಮಲಗಲ್ಲ. ಜೀವ ಕೊಟ್ಟು ಬದುಕಿಸಿದ ತಾಯಿ ಸತ್ತುಬಿದ್ದಾಳ, ಹೆಂಗೆ ನಿದ್ದೆ ಮಾಡ್ಲಿ? ನಾಳೆ ಮಣ್ಣಾಗ ಇಟ್ಟರೆ ಅಮ್ಮ ಸಿಗದಿಲ್ಲ' ಅಂದಳು. ರಾಮಚಂದ್ರನ ಕಡೆ ತಿರುಗಿದ ಚಂದ್ರವತಿ, 'ರಾಮೂ ನಿನ್ನ ನಾ ಎಬ್ಬಿಸ್ತೀನಿ ನೀ ಮಲಗಪ್ಪ' ಅಂತ ರಾಮಚಂದ್ರನ ಎದ್ದೇಳಿಸಿ ಪಕ್ಕದ ಕೋಣೇಲಿ ಮಲಗಿಸಿದ್ದರು. ಅಪ್ಪ ಸತ್ತ, ಈಗ ಅಜ್ಜಿ ಸತ್ತಿದ್ಲು, ಜೀವದ ಗೆಳತಿ ರಾಧಾನೂ ಹೋದಳು.

ರಾಮಚಂದ್ರ ಗರಬಡಿದವರಂತೆ ಸ್ವಲ್ಪ ದಿನ ಮಂಕಾಗಿ ಕುಳಿತ. ಚಂದ್ರವತಿ, ಮಗ ಹಿಂಗಾದರೆ ಹುಚ್ಚ ಆಗ್ತಾನಂತ ಅವನ ಅಕ್ಕನ ಊರಲ್ಲಿ ನಾಲ್ಕು ದಿನ ಇದ್ದು ಬರಲು ಕಳಿಸಿದಳು. ತನ್ನ ಅಕ್ಕ ಭಾಗ್ಯಳ ಊರಿನ ಗುಡ್ಡ, ಹೊಳೆ, ಹೊಳೆ ಬದಿಯ ತೋಟ, ಅಲ್ಲಿಯ ಸ್ವಚ್ಛ ಗಾಳಿ ರಾಮಚಂದ್ರನನ್ನು ದಿನ ದಿನಕ್ಕೆ ಗೆಲುವಾಗಿಸಿತು. ಹೀಗಿರುವಾಗಲೇ ಅವನು ಕಾಲೇಜಿನಲ್ಲಿ ಲೆಕ್ಚರರ್ ಆಗಿ ಸೆಲೆಕ್ಟ್ ಆದ ಸಿಹಿ ಸುದ್ದಿ ಬಂತು. ನೌಕರಿ ಬಂದಮೇಲೆ ಅವನು ಮಾಡಿದ ಮೊದಲ ಕೆಲಸ, ಆ ಊರಿಂದ ಚಂದ್ರವತೀನ ಕರೆದುಕೊಂಡು ತಾನು ಕೆಲಸ ಮಾಡುವ ಊರಲ್ಲಿ ಬಾಡಿಗೆ ಮನೆ ಮಾಡಿದ್ದು. ಸುಮಾರು ಮೂರು ವರ್ಷದ ಮೇಲಾಯಿತು ನೌಕರಿ ಸೇರಿ. ರಾಮಚಂದ್ರನ ಅಕ್ಕ ಊರಿಗೆ ಬಂದಾಗ, 'ಮದುವೆ ಮಾಡಿಕೋ ರಾಮು' ಅಂದಳು. 'ಅವಾಗ ಆ ಅಜ್ಜಿ ಜೀವ ನಿಂತಿದ್ಲು. ಈಗ ನೀನು ಶುರು ಹಚ್ಚಿಕೊಂಡೆಯಾ' ಅಂತ ಅಕ್ಕನಿಗೆ ಗದರಿದ್ದ. 'ಒಳ್ಳೆ ನೌಕರಿ, ಅಷ್ಟೇ ಒಳ್ಳೆ ಸಂಬಳ ಇದೆ. ಚಂದ್ರವತಿ ಸತ್ತ ಮೇಲೆ ನಿನ್ನ ಯಾರು ನೋಡಿಕೊಳ್ಳುತ್ತಾರೆ' ಅಂತ ಇನ್ನೂ ಏನೇನೋ ಅನ್ನುವುದಕ್ಕೆ ಬಂದಾಗ, ಸಾಕು ಅನ್ನುವಂತೆ ಸನ್ನೆ ಮಾಡಿ, ಸಿಗರೇಟ್ ಕೈಯಲ್ಲಿ ಹಿಡಿದುಕೊಂಡು ಮ್ಯಾಳಿಗೆ ಮೇಲೆ ಹೋಗಿ ನಿಲ್ಲುತ್ತಿದ್ದ.

***

ಮದುವೆ ಫೋಟೊ ಆಲ್ಬಮಿನ ತರಹ, ಇಲ್ಲವೇ ಯಾವುದೋ ಸಿನಿಮಾದ ಟ್ರೇಲರಿನಂತೆ ರಾಮಚಂದ್ರನ ಮುಂದೆ ತನ್ನ ಜೀವನದ ಬಹುಮುಖ್ಯ ಘಟನೆಗಳು ಪಾಸ್ ಆದವು. ಯಾವುದು ಸ್ಪಷ್ಟವಿಲ್ಲ. ಎಲ್ಲ ಸಣ್ಣ ಸಣ್ಣ ತುಣುಕುಗಳಂತೆ. ಆದರೆ, ಒಂದಂತೂ ತಾನೂ ಮಾಡಿದ್ದು ಒಳ್ಳೆಯದೋ, ಕೆಟ್ಟದೋ ಒಳಮನಸ್ಸಿಗಂತೂ ಸ್ಪಷ್ಟವಿತ್ತು. ಸೀದಾ ಎದ್ದವನೇ ಫ್ಯಾನ್ ಬಂದು ಮಾಡಿದ. ಅದು ತನ್ನ ಚಲನೆಯ ವೇಗ ಕಳೆದುಕೊಂಡು ತಿರುಗಿ ತಿರುಗಿ ನಿಲ್ಲುವುದನ್ನೇ ಕಾಯುತ್ತ, ಕೊನೆಗೆ ನಿಂತಾಗ, ಕಣ್ಣಲ್ಲಿ ಎಂತಹದೋ ಬೆಳಕು ಮೂಡಿದಂತಾಗಿ, ಎದ್ದವನೇ ಗಾದಿಯ ಮೇಲಿನ ಮೇಲುಹೊದಿಕೆ ತೆಗೆದು ಫ್ಯಾನ್‌ಗೆ ಹಾಕಿ ಗಟ್ಟಿಯಾಗಿ ಕಟ್ಟಿದ. ಸುಮಾರು ಸಲ ಸಾವಿನ ಹತ್ತಿರ ಹೋಗಿದ್ದ. ಆದರೆ, ಅರ್ಧದಲ್ಲೇ ಬಂದಿದ್ದ. ಇವತ್ತು ಗಟ್ಟಿ ಮನಸ್ಸು ಮಾಡಿದ. ಅಷ್ಟರಲ್ಲಿ ಫೋನ್ ರಿಂಗಣಿಸಿತು. ಫೋನ್ ಎತ್ತಿದರೆ ಮತ್ತೆ ಸಾವು ಮುಂದೆಹೋಗುತ್ತೆ ಅಂತ ಗಟ್ಟಿ ಮನಸ್ಸು ಮಾಡಿ ಕುಳಿತ. ಪದೇ ಪದೇ ಫೋನ್ ಬರತೊಡಗಿತು. ಅದರ ನಡುವೆ ಒಮ್ಮೆ ಬೆಕ್ಕಿನ ಮಿಯ್ಯಾಂ ಅನ್ನುವ ಶಬ್ದ. ಫೋನಿನ ರಿಂಗಣಿಸುವ ಶಬ್ದಕ್ಕಿಂತ ಬೆಕ್ಕಿನ ಮಿಯ್ಯಾಂ ಅನ್ನುವ ಶಬ್ದ ಅವನನ್ನು ರೊಚ್ಚಿಗೆಬ್ಬಿಸಿತು. ಇವತ್ತು ಆಗಿದ್ದು ಆಗಿಹೋಗಲಿ, ನೋಡೇಬಿಡೋಣ ಎನ್ನುವಂತೆ ಎದ್ದವನೇ ತಲೆದಿಂಬು ತೆಗೆದುಕೊಂಡು ಬೀಸಿ ಬೀಸಿ ಒಗೆಯತೊಡಗಿದ. 'ಬೇಕೂಫ್ ನನ್ ಮಗನೆ, ಮಿಯ್ಯಾಂ ಅನ್ನುವುದಲ್ಲ, ಬಾ ಕಣ್ಮುಂದೆ' ಅಂತ ರೂಮಿನ ತುಂಬೆಲ್ಲಾ ಓಡಾಡಿದ. ಗೋಡೆ, ಬಾಗಿಲು, ಕಿಟಕಿ, ಮಂಚ, ನೆಲ, ಪ್ರತಿ ಇಂಚು ಇಂಚು ಜಾಗವನ್ನೂ ದಿಂಬಿನಿಂದ ಬಡಿಯುತ್ತಾ ಗಾಳಿಯಲ್ಲಿ ಗುದ್ದಾಡುತ್ತ ಓಡಾಡತೊಡಗಿದ. ಇವನ ರೌದ್ರಾವತಾರಕ್ಕೆ ಬೆಕ್ಕಿನ ಮಿಯ್ಯಾಂ ಅನ್ನುವ ಶಬ್ದ ಅಡಗಿಹೋಯಿತು. ಆದರೂ ರಾಮಚಂದ್ರ ಪದೇ ಪದೇ 'ಇನ್ನೊಮ್ಮೆ ಮಿಯ್ಯಾಂ ಅಂದ್ರೆ ನಿನ್ನ ಚರ್ಮ ಸುಲೀತೀನಿ' ಅಂತ ಕಿರುಚುತ್ತಲೇ ರೂಮಿನ ಸುತ್ತೆಲ್ಲಾ ಓಡಾಡುತ್ತಲೇ ಇದ್ದ. ●